Test Paper : III

Test Subject : **COMMERCE**

Test Subject Code : **K-0117**

Test Booklet Serial No. : ____________________

OMR Sheet No. : ____________________

Roll No.

(Figures as per admission card)

**Name & Signature of Invigilator/s**

Signature : ____________________

Name : ____________________

**Paper : III**

**Subject : COMMERCE**

Time : 2 Hours 30 Minutes

Maximum Marks : 150

Number of Pages in this Booklet : **24**

Number of Questions in this Booklet : **75**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಎಪ್ಪತ್ತೈದು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   **ಉದಾಹರಣೆ:** (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆಗಳಿಗೆ ಉತ್ತರಗಳನ್ನು, **ಪತ್ರಿಕೆ III ಪುಸ್ತಿಕೆಯೊಳಗೆ ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ ಮಾತ್ರವೇ ಸೂಚಿಸತಕ್ಕದ್ದು.** OMR ಹಾಳೆಯಲ್ಲಿನ ಅಂಡಾಕೃತಿ ಹೊರತುಪಡಿಸಿ ಬೇರೆ ಯಾವುದೇ ಸ್ಥಳದಲ್ಲಿ ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗಿರುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್, ವಿದ್ಯುನ್ಮಾನ ಉಪಕರಣ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**
14. **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

**Instructions for the Candidates**

1. Write your roll number in the space provided on the top of this page.
2. This paper consists of seventy five multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example** : (A) (B) ● (D)
   where (C) is the correct response.
5. Your responses to the question of Paper III are to be indicated in the **OMR Sheet kept inside the Booklet**. If you mark at any place other than in the circles in OMR Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet after the examination.
11. **Use only Blue/Black Ball point pen.**
12. **Use of any calculator, Electronic gadgets or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**

Total Number of Pages : 24

**ವಾಣಿಜ್ಯ ಶಾಸ್ತ್ರ**

**ಪೇಪರ್ – III**

**ಗಮನಿಸಿ :** ಈ ಪತ್ರಿಕೆಯು **(75) ಎಪ್ಪತ್ತೈದು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳನ್ನೂ **ಕಡ್ಡಾಯವಾಗಿ** ಉತ್ತರಿಸಬೇಕು.

**1.** ಈ ಕೆಳಗಿನವುಗಳಲ್ಲಿ ಯಾವುದು ತಪ್ಪು ?

(A) ಭಾರತದಲ್ಲಿನ ಲೆಕ್ಕಶಾಸ್ತ್ರದ ಮಾಪನಗಳನ್ನು IASB ವೃದ್ಧಿಗೊಳಿಸಿದೆ

(B) ಮಾನವ ಸಂಪನ್ಮೂಲ ಲೆಕ್ಕಾಚಾರವು ಭಾರತದಲ್ಲಿ ಕಡ್ಡಾಯವಾಗಿದೆ

(C) ಬೆಲೆಯ ಏರಿಳಿತಗಳನ್ನು ಗಮನಿಸಿ ಆಸ್ತಿಗಳ ಮೌಲ್ಯ ನಿರ್ಧರಿಸುವುದು ಹಣದುಬ್ಬರ ಲೆಕ್ಕಾಚಾರದ ಉದ್ದೇಶ

(D) ಆದಾಯ ಕೇಂದ್ರಗಳನ್ನು ಹಾಗೂ ವೆಚ್ಚ ಕೇಂದ್ರಗಳನ್ನು ಎಲ್ಲಿ ಗುರುತಿಸಲು ಸಾಧ್ಯವೋ ಅಲ್ಲಿ ಜವಾಬ್ದಾರಿ ಲೆಕ್ಕಾಚಾರವನ್ನು ಅಳವಡಿಸಬಹುದು

**2.** ಒಂದು ಯಂತ್ರದ ವೆಚ್ಚ ರೂ. 70,000 ಆಗಿದೆ. ಅದರ ಜೀವಿತಾವಧಿ 10 ವರ್ಷ, ಕೊನೆಗೆ ರೂ. 5,000ಕ್ಕೆ ಮಾರಾಟ ಮಾಡಬಹುದಾಗಿದೆ. ಸ್ಟ್ರೇಟ್ ಲೈನ್ ಸವಕಳಿ ಪದ್ಧತಿಯಡಿ, ಮೊದಲ 4 ವರ್ಷಗಳಿಗೆ ಅದರ ಸವಕಳಿ ಪ್ರಮಾಣ

(A) ರೂ. 28,000

(B) ರೂ. 26,000

(C) ರೂ. 22,000

(D) ರೂ. 20,000

**3.** ಈ ಕೆಳಗಿನವುಗಳನ್ನು ಹೊಂದಿಸಿ :

| **ಪಟ್ಟಿ – I** | **ಪಟ್ಟಿ – II** |
|---|---|
| a. ಹಣ ಮೌಲ್ಯಮಾಪನ ಪರಿಕಲ್ಪನೆ | i. ಎಲ್ಲಾ ರೀತಿಯ ಉದ್ದಿಮೆಗಳಿಗೆ ಅನ್ವಯ |
| b. ವ್ಯಾಪಾರ ಸಂಸ್ಥೆ ಪರಿಕಲ್ಪನೆ | ii. ಮೂಲ ಲೆಕ್ಕಾಚಾರ |
| c. ವೆಚ್ಚ ಪರಿಕಲ್ಪನೆ | iii. ಆಸ್ತಿಗಳ ಅಸಲಿ ಖರೀದಿ ಬೆಲೆ |
| d. ಡುಯಲ್ ಆಸ್ಪೆಕ್ಟ್ ಪರಿಕಲ್ಪನೆ | iv. ಸ್ವಭಾವತಃ ಹಣಕಾಸಿನ ವ್ಯವಹಾರಗಳಿಗೆ ಅನ್ವಯ |

**ಸಂಕೇತಗಳು :**

| | a | b | c | d |
|---|---|---|---|---|
| (A) | iv | ii | iii | i |
| (B) | iii | i | iv | ii |
| (C) | iv | i | iii | ii |
| (D) | iii | ii | iv | i |

**4.** ಭವಿಷ್ಯದ ವ್ಯಾಪಾರದ ಮೇಲಿನ ನಿಷೇಧವನ್ನು ಭಾರತ ಸರ್ಕಾರವು ________ ರಲ್ಲಿ ಹಿಂತೆಗೆಯಿತು.

(A) 2001 (B) 2010

(C) 2000 (D) 2003

**5.** ರೂ. 110 ವಾರ್ಷಿಕ ಬಡ್ಡಿ ನೀಡುವ ನಿರಂತರ ಬಾಂಡ್‌ನ ಮೌಲ್ಯ, r = ಶೇ 11 ಇದ್ದಲ್ಲಿ ಎಷ್ಟು ?

(A) ರೂ. 10,000 (B) ರೂ. 1,100

(C) ರೂ. 110 (D) ರೂ. 1,000

# COMMERCE

## PAPER – III

**Note :** This paper contains **seventy-five (75)** objective type questions. **Each** question carries **two (2)** marks. **All** questions are **compulsory**.

**1.** Which of the following statement is incorrect ?

(A) Accounting standards in India are framed by IASB

(B) Human resource accounting is mandatory in India

(C) Inflation accounting deals with valuation of assets considering price fluctuations for valuation

(D) Responsibility accounting is followed where revenue and cost centres can be identified

**2.** The cost of a machine is Rs. 70,000. It has a 10 year life at the end of which it is expected to realise Rs. 5,000. The depreciation for first 4 years on a straight line basis is

(A) Rs. 28,000

(B) Rs. 26,000

(C) Rs. 22,000

(D) Rs. 20,000

**3.** Match the following :

| | **List – I** | | **List – II** |
|---|---|---|---|
| a. | Money measurement concept | i. | Applicable to all forms of businesses |
| b. | Business entity concept | ii. | Basic accounting |
| c. | Cost concept | iii. | Original purchase price of assets |
| d. | Dual aspect concept | iv. | Applicable to those transactions of financial nature |

**Codes :**

| | **a** | **b** | **c** | **d** |
|---|---|---|---|---|
| (A) | iv | ii | iii | i |
| (B) | iii | i | iv | ii |
| (C) | iv | i | iii | ii |
| (D) | iii | ii | iv | i |

**4.** Prohibition on forward trading was rescinded by Govt. of India in

(A) 2001 (B) 2010

(C) 2000 (D) 2003

**5.** The present value of perpetual bond that pays interest of Rs. 110 annually, given r = 11% will be

(A) Rs. 10,000 (B) Rs. 1,100

(C) Rs. 110 (D) Rs. 1,000

**6.** ರೂ. 1,000 ಶೇರು ಬೆಲೆಯ ಜೀರೊ ಕೂಪನ್ ಬಾಂಡ್‌ನ ಮಾರುಕಟ್ಟೆ ಬೆಲೆ ರೂ. 596.30. ಅದರ ಮಿಕ್ಕ ಜೀವಾವಧಿ 6 ವರ್ಷಗಳು. ಅದರ YTM ಎಷ್ಟು ?

(A) ಶೇ. 10 (B) ಶೇ. 9

(C) ಶೇ. 8 (D) ಶೇ. 12

**7. ಪ್ರತಿಪಾದನೆ (A)** : ಬ್ಲೂ ಚಿಪ್ ಶೇರುಗಳು ಸ್ಟಾಕ್ ವಿನಿಮಯ ಪಟ್ಟಿಯಲ್ಲಿ ಸೇರಿರುತ್ತವೆ.

**ತರ್ಕ (R)** : ಬ್ಲೂ ಚಿಪ್ ಶೇರುಗಳು ನಿಶ್ಚಿತ ಹೆಚ್ಚಿನ ಲಾಭಾಂಶ ನೀಡುತ್ತವೆ.

**ಸಂಕೇತಗಳು :**

(A) ಪ್ರತಿಪಾದನೆ (A) ಸರಿ, ತರ್ಕ (R) ತಪ್ಪು

(B) ಪ್ರತಿಪಾದನೆ (A) ತಪ್ಪು, ತರ್ಕ (R) ಸರಿ

(C) ಪ್ರತಿಪಾದನೆ(A) ಹಾಗೂ ತರ್ಕ (R) ಎರಡೂ ತಪ್ಪು

(D) ಪ್ರತಿಪಾದನೆ (A) ಹಾಗೂ ತರ್ಕ (R) ಎರಡೂ ಸರಿ

**8.** ಮಾರುಕಟ್ಟೆಯಲ್ಲಿನ ಬದಲಾವಣೆಗಳಿಗೆ ಒಂದು ಸರಕು ವಾಪಾಸಾತಿಯಲ್ಲಾಗುವ ಸಂವೇದನೆಯನ್ನು ಮಾಪನ ಮಾಡುವ ಸಾಧನ ಯಾವುದು ?

(A) ವಿಚಲನ ಮಾಪನ

(B) ಬೀಟಾ

(C) ಆಲ್ಫಾ

(D) ವ್ಯಾಲ್ಯೂ-ಅಟ್-ರಿಸ್ಕ್

**9.** ಕೆಳಗಿನವುಗಳಲ್ಲಿ ಯಾವುದು ಹೊಸ ಸೆಕ್ಯೂರಿಟಿಗಳನ್ನು ಮಾರಾಟ ಮಾಡುವ ವಿಧಾನಗಳು ?

1. ಸೆಕ್ಯೂರಿಟಿಗಳನ್ನು ಪಟ್ಟಿಯಲ್ಲಿ ಸೇರಿಸುವುದು
2. ಜಾಬರ್ಸ್ ಹಾಗೂ ದಲ್ಲಾಳಿಗಳು
3. ಸೆಕ್ಯೂರಿಟಿಗಳ ಖಾಸಗಿ ಸ್ಥಾಪನೆಯ ಮೂಲಕವಾಗಿ
4. ವಿಶೇಷ ಸೌಲತ್ತಿನ ಚಂದಾದಾರಿಕೆಗಳು

**ಸಂಕೇತಗಳು :**

(A) 1 ಮತ್ತು 2

(B) 2 ಮತ್ತು 3

(C) 3 ಮತ್ತು 4

(D) 1, 2, 3 ಮತ್ತು 4

**10.** 'ಮಾರ್ಕಿಂಗ್-ಟು-ಮಾರ್ಕೆಟ್' ಎಂದರೆ, ________ ಆಧಾರದ ಮೇಲೆ ವ್ಯಾಪಾರಸ್ಥರ ಲಾಭ-ನಷ್ಟಗಳನ್ನು ಹೊಂದಾಣಿಕೆ ಮಾಡುವುದು.

(A) ದೈನಂದಿನ (B) ವಾರದ

(C) ಮಾಸಿಕ (D) ಗಂಟೆಯ

**11.** ಈ ಕೆಳಗಿನವುಗಳನ್ನು ಭಾರತದಲ್ಲಿ ಅಸ್ತಿತ್ವಕ್ಕೆ ಬಂದ ಕ್ರಮದಲ್ಲಿ ಜೋಡಿಸಿ.

1. ಮಸಾಲಾ ಬಾಂಡ್‌ಗಳು
2. ಪರಿವರ್ತನ ಸಾಲಪತ್ರಗಳು
3. ಸಾಲಪತ್ರಗಳು
4. ಹಣದುಬ್ಬರ ಸೂಚ್ಯಂಕ ಬಾಂಡ್‌ಗಳು

**ಸಂಕೇತಗಳು :**

(A) 2, 3, 4, 1

(B) 3, 2, 4, 1

(C) 1, 3, 4, 2

(D) 2, 3, 1, 4

**12.** 'ಷಾರ್ಟ್ ಸೆಲ್ಲಿಂಗ್' ಅಂದರೆ

(A) ಮಾರಾಟಗಾರನ ಬಳಿಯಿರುವ ಶೇರುಗಳಿಗಿಂತ ಕಡಿಮೆ ಶೇರುಗಳನ್ನು ಮಾರಾಟ ಮಾಡುವುದು

(B) ಒಡೆತನವಿಲ್ಲದ ಶೇರುಗಳನ್ನು ಮಾರಾಟ ಮಾಡುವುದು

(C) ಕಡಿಮೆ ಅವಧಿಯಲ್ಲಿ ಶೇರುಗಳನ್ನು ಮಾರಾಟ ಮಾಡುವುದು

(D) ಸರಕುಗಳನ್ನು ಮಾರಾಟ ಮಾಡದಿರುವುದು ಮತ್ತು ಹೊಂದದಿರುವುದು

**13. ಪ್ರತಿಪಾದನೆ (A)** : 'ಬೆಲೆ ಕಂಡುಹಿಡಿಯುವಿಕೆ'ಯು ಡಿರವೆಟಿವ್ಸ್ ಮಾರುಕಟ್ಟೆಯ ಒಂದು ಕಾರ್ಯ.

**ತರ್ಕ (R)** : 'ಬೆಲೆ ಕಂಡುಹಿಡಿಯುವಿಕೆ'ಯು ಇಂದಿನ ಬೆಲೆಯ ಮೇಲಿನ ಭವಿಷ್ಯ ಬೆಲೆಯ ಪ್ರಭಾವದ ಅಧ್ಯಯನಕ್ಕೆ ಸಂಬಂಧಿಸಿದೆ.

**ಸಂಕೇತಗಳು :**

(A) ಪ್ರತಿಪಾದನೆ (A) ಸರಿ, ತರ್ಕ (R) ತಪ್ಪು

(B) ಪ್ರತಿಪಾದನೆ (A) ತಪ್ಪು, ತರ್ಕ (R) ಸರಿ

(C) ಪ್ರತಿಪಾದನೆ(A) ಹಾಗೂ ತರ್ಕ (R) ಎರಡೂ ತಪ್ಪು

(D) ಪ್ರತಿಪಾದನೆ (A) ಹಾಗೂ ತರ್ಕ (R) ಎರಡೂ ಸರಿ

**6.** A zero-coupon bond of maturity value of Rs. 1,000 is currently selling in the market for Rs. 596.30. The term to maturity is 6 years. What is its YTM ?

(A) 10% (B) 9%
(C) 8% (D) 12%

**7. Assertion (A) :** Blue chip shares are listed on stock exchange.

**Reason (R) :** Blue chip shares give consistent high dividends.

**Codes :**

(A) (A) is right, (R) is wrong
(B) (A) is wrong, (R) is right
(C) Both (A) and (R) are wrong
(D) Both (A) and (R) are right

**8.** The sensitivity of a stock's return to the changes in the market is measured by

(A) Standard deviation
(B) Beta
(C) Alpha
(D) Value at risk

**9.** Which of the following are the methods of marketing new issues of securities ?

1. Listing of securities
2. Jobbers and brokers
3. Private placement of securities
4. Privileged subscriptions

**Codes :**

(A) 1 and 2
(B) 2 and 3
(C) 3 and 4
(D) 1, 2, 3 and 4

**10.** "Marking To Market" implies adjusting traders profits or loss position on _________ basis.

(A) Daily (B) Weekly
(C) Monthly (D) Hourly

**11.** Arrange the following in the order in which they came into existence in India.

1. Masala Bonds
2. Convertible Debentures
3. Debentures
4. Inflation Index Bonds

**Codes :**

(A) 2, 3, 4, 1
(B) 3, 2, 4, 1
(C) 1, 3, 4, 2
(D) 2, 3, 1, 4

**12.** "Short selling" means

(A) Selling less number of shares than the seller holds
(B) Selling of shares without owning them
(C) Selling of shares in a short period
(D) Not selling and holding the stocks

**13. Assertion (A)** : "Price Discovery" is a function of derivatives market.

**Reason (R)** : 'Price Discovery' deals with the study of influence of futures price on spot price.

**Codes :**

(A) (A) is correct, (R) is incorrect
(B) (A) is incorrect, (R) is correct
(C) Both (A) and (R) are incorrect
(D) Both (A) and (R) are correct

**14.** ಬಡ್ಡಿದರದ ಇಳಿತದಿಂದ ಸರ್ಕಾರಿ ಸೆಕ್ಯೂರಿಟಿಗಳ ಬೆಲೆಗಳು
(A) ಕಡಿಮೆಯಾಗುತ್ತವೆ
(B) ಹೆಚ್ಚಾಗುತ್ತವೆ
(C) ಏನೂ ಬದಲಾವಣೆಯಾಗುವುದಿಲ್ಲ
(D) ಪರಸ್ಪರ ಸಂಬಂಧವಿಲ್ಲ

**15.** ಈ ಕೆಳಗಿನವುಗಳನ್ನು ಹೊಂದಿಸಿ :

| **ಪಟ್ಟಿ – I** | **ಪಟ್ಟಿ – II** |
|---|---|
| a. ಇಂಡೆಕ್ಸ್ ಆಪ್ಶನ್ | i. ನಷ್ಟರಹಿತ ಲಾಭ |
| b. ಫಂಜಿಬಿಲಿಟಿ | ii. ಆಪ್ಶನ್ |
| c. ಆರ್‌ಬಿಟ್ರೇಜ್ | iii. ವಿನಿಮಯ |
| d. ಅಮೇರಿಕನ್ | iv. ಭವಿಷ್ಯ ಮಾರುಕಟ್ಟೆ |
| | v. ನಗದು ತೀರ್ಮಾನ |

**ಸಂಕೇತಗಳು :**

| | a | b | c | d |
|---|---|---|---|---|
| (A) | v | iv | i | ii |
| (B) | v | iv | ii | i |
| (C) | iii | iv | ii | i |
| (D) | v | iii | i | ii |

**16.** ಒಂದು ಪದಾರ್ಥವು ಮಾಗಿದ ಹಂತದಲ್ಲಿರುವಾಗ
(A) ಇಳಿಕೆಯ ದರದಲ್ಲಿ ಮಾರಾಟ ಹೆಚ್ಚಾಗುತ್ತ ಹೋಗುತ್ತದೆ
(B) ಏರಿಕೆಯ ದರದಲ್ಲಿ ಮಾರಾಟದಲ್ಲಿ ಇಳಿಕೆಯಾಗುತ್ತದೆ
(C) ಏರಿಕೆಯ ದರದಲ್ಲಿ ಮಾರಾಟವು ಹೆಚ್ಚಾಗುತ್ತ ಹೋಗುತ್ತದೆ
(D) ಮಾರಾಟವು ಸ್ವಲ್ಪ ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿರುತ್ತದೆ

**17.** ಚಿನ್ಹೆಯ ಅಭಿವೃದ್ಧಿ ಸೂಚಿ ಎಂದರೆ
(A) ಒಂದು ಚಿನ್ಹೆಯ ಮೇಲೆ ಇನ್ನೊಂದು ಚಿನ್ಹೆಯ ಮಾರಾಟ ಸೂಚಿ
(B) ಚಿನ್ಹೆಯ ಮಾರಾಟಕ್ಕೂ ವರ್ಗದ ಮಾರಾಟಕ್ಕೂ ಇರುವ ಸೂಚಿ
(C) ಒಂದು ಚಿನ್ಹೆಯ ಮಾರುಕಟ್ಟೆಯಲ್ಲಿನ ಬೆಳವಣಿಗೆಯ ದರ
(D) ಒಂದು ಸರಕಿನ ಮಾರಾಟದ ಬೆಳವಣಿಗೆಯ ದರ

**18.** ಚಿನ್ಹೆಯ ವಿಸ್ತರಣೆ ಎಂದರೆ
(A) ಅಸ್ತಿತ್ವದಲ್ಲಿರುವ ಚಿನ್ಹೆಯನ್ನು ಬಳಸಿ ಹೊಸ ಸರಕನ್ನು ಮಾರುಕಟ್ಟೆಗೆ ಬಿಡಲು ಉಪಯೋಗಿಸುವುದು
(B) ಒಂದು ಚಿನ್ಹೆಯನ್ನು ಮಾರುಕಟ್ಟೆಗೆ ಪರಿಚಯಿಸುವುದು
(C) ಅಸ್ತಿತ್ವದಲ್ಲಿರುವ ಚಿನ್ಹೆಯನ್ನು ಹೊಸ ಮಾರುಕಟ್ಟೆಗಳಿಗೆ ವಿಸ್ತರಿಸುವುದು
(D) ಹೊಸ ಮಾರುಕಟ್ಟೆಯಲ್ಲಿ ಹೊಸ ಚಿನ್ಹೆಯನ್ನು ಪರಿಚಯಿಸುವುದು

**19.** ಈ ಕೆಳಗಿನವುಗಳನ್ನು ಹೊಂದಿಸಿರಿ :

| **ಪಟ್ಟಿ – I** | **ಪಟ್ಟಿ – II** |
|---|---|
| a. ಸರಕಿನ ಸ್ಥಾನೀಕರಣ | i. ಪೂರ್ವ ಯೋಜನೆಯಿಲ್ಲದೆ ಕೊಳ್ಳುವುದು |
| b. ಹಠಾತ್ ಕೊಳ್ಳುವುದು | ii. ಗ್ರಾಹಕರ ಮನಸ್ಸಿನೊಳಗೆ ಸರಕನ್ನು ತುಂಬುವುದು |
| c. ಪೂರೈಕೆ ಸರಪಳಿ ನಿರ್ವಹಣೆ | iii. ವ್ಯಾಪಾರಿಗಳ ಕಾರ್ಯಕ್ಷಮತೆಯನ್ನು ಅವರ ಕೌಶಲಗಳನ್ನು ಮೊನಚಾಗಿಸುವುದರ ಮೂಲಕ ಹೆಚ್ಚಿಸುವುದು |
| d. ವ್ಯಾಪಾರಿಗಳ ತರಬೇತಿ | iv. ಭೌತಿಕ ಮತ್ತು ಮಾರುಕಟ್ಟೆ ಸಾಗಾಣಿಕೆಗಿಂತ ಹೆಚ್ಚು ವ್ಯಾಪ್ತಿಯುಳ್ಳದ್ದು |

**ಸಂಕೇತಗಳು :**

| | a | b | c | d |
|---|---|---|---|---|
| (A) | iii | i | ii | iv |
| (B) | ii | i | iv | iii |
| (C) | i | ii | iv | iii |
| (D) | ii | i | iii | iv |

**14.** A fall in interest rates will make prices of Govt. Securities

(A) Go down

(B) Go up

(C) Remain unchanged

(D) Unrelated to each other

**15.** Match the following :

| | **List – I** | | **List – II** |
|---|---|---|---|
| a. | Index option | i. | Riskless profits |
| b. | Fungibility | ii. | Option |
| c. | Arbitrage | iii. | Exchange |
| d. | American | iv. | Futures market |
| | | v. | Cash settlement |

**Codes :**

| | **a** | **b** | **c** | **d** |
|---|---|---|---|---|
| (A) | v | iv | i | ii |
| (B) | v | iv | ii | i |
| (C) | iii | iv | ii | i |
| (D) | v | iii | i | ii |

**16.** When a product is in the maturity stage

(A) The sales will increase at a decreasing rate

(B) The sales will decline at an increasing rate

(C) The sales will increase at an increasing rate

(D) The sales will be more or less stagnant

**17.** Brand development index is

(A) The index sales of one brand to another brand

(B) The index of brand sales to category sales

(C) The rate of growth of a brand in the market

(D) The rate of growth of sales of a product

**18.** Brand extension means

(A) Using an existing brand to introduce a new product

(B) Introducing a brand into a market

(C) Extending the existing brand to new markets

(D) Introducing new brand in a new market

**19.** Match the following :

| | **List – I** | | **List – II** |
|---|---|---|---|
| a. | Product positioning | i. | Buying without advance planning |
| b. | Impulse buying | ii. | Putting the product in the mind of customer |
| c. | Supply chain management | iii. | Improving performance of dealers through sharpening their skills |
| d. | Dealer training | iv. | Larger in scope than physical and marketing logistics |

**Codes :**

| | **a** | **b** | **c** | **d** |
|---|---|---|---|---|
| (A) | iii | i | ii | iv |
| (B) | ii | i | iv | iii |
| (C) | i | ii | iv | iii |
| (D) | ii | i | iii | iv |

**20.** ಕೊಳ್ಳುವಿಕೆಯ ಪ್ರಕ್ರಿಯೆಯನ್ನು ಸರಿಯಾಗಿ ಅನುಕ್ರಮಗೊಳಿಸಿ.

i. ಮನೋಭಾವ

ii. ಅಂಗೀಕರಿಸುವಿಕೆ

iii. ಕಾನೂನು ಬದ್ಧಗೊಳಿಸುವಿಕೆ

iv. ಎಚ್ಚರ

(A) iv, iii, ii, i

(B) i, ii, iii, iv

(C) iv, i, iii, ii

(D) iv, iii, i, ii

**21.** ಅಂತರ್ಜಾಲದಲ್ಲಿ ತನ್ನ ಸರಕು ಮತ್ತು ಸೇವೆಗಳ ಬಗ್ಗೆ ತಿಳಿಸಲು, ಉತ್ತೇಜಿಸಲು ಹಾಗೂ ಮಾರಾಟ ಮಾಡಲು ಒಂದು ಸಂಸ್ಥೆಯು ಮಾಡುವ ಪ್ರಯತ್ನವು

(A) ಇ – ವಾಣಿಜ್ಯ

(B) ಇ – ವ್ಯವಹಾರ

(C) ಇ – ಮಾರಾಟಗಾರಿಕೆ

(D) ಇ – ಮಾರುವಿಕೆ

**22.** **ಪ್ರತಿಪಾದನೆ (A)** : ಆ್ಯಪಲ್ ಐ ಫೋನು ಬಹಳ ದುಬಾರಿಯಾದರೂ ಯುವ ಜನತೆಗೆ ಅದನ್ನು ಹೊಂದುವ ಕನಸಿದೆ.

**ತರ್ಕ (R)** : ಆ್ಯಪಲ್ ಸಂಸ್ಥೆಯು ತನ್ನ ಫೋನುಗಳ ಬೆಲೆಯನ್ನು ನಿರ್ಧರಿಸಲು ಸರಕು–ಸರಣಿ ಬೆಲೆ ನಿರ್ಧರಿಸುವ ವಿಧಾನವನ್ನು ಅನುಸರಿಸುತ್ತದೆ.

**ಸಂಕೇತಗಳು :**

(A) (A) ಮತ್ತು (R) ಎರಡೂ ಸರಿಯಾಗಿಲ್ಲ

(B) (A) ಮತ್ತು (R) ಎರಡೂ ಸರಿಯಾಗಿವೆ

(C) (A) ಸರಿಯಾಗಿದೆ ಆದರೆ (R) ಸರಿಯಾಗಿಲ್ಲ

(D) (A) ಸರಿಯಾಗಿಲ್ಲ ಆದರೆ (R) ಸರಿಯಾಗಿದೆ

**23.** **ಪ್ರತಿಪಾದನೆ (A)** : ಎಫ್.ಎಂ.ಸಿ.ಜಿ. ಸರಕುಗಳ ಬೇಡಿಕೆ ರೇಖೆಯು ಸಾಮಾನ್ಯವಾಗಿ ಸಂಬಂಧಕವಾಗಿ ಹಿಂಜುವುದಿಲ್ಲ.

**ತರ್ಕ (R)** : ಎಫ್.ಎಂ.ಸಿ.ಜಿ. ಕಂಪನಿಗಳು ಸಾಮಾನ್ಯವಾಗಿ ಮೇಲಿನ ಸ್ತರದ ಬೆಲೆಯನ್ನು ನಿಗದಿಪಡಿಸುವ ತಂತ್ರವನ್ನು ಬೆಲೆ ನಿಗದಿಗೆ ಬಳಸುತ್ತವೆ.

**ಸಂಕೇತಗಳು :**

(A) (A) ಮತ್ತು (R) ಎರಡೂ ಸರಿಯಾಗಿಲ್ಲ

(B) (A) ಮತ್ತು (R) ಎರಡೂ ಸರಿಯಾಗಿವೆ

(C) (A) ಸರಿಯಾಗಿಲ್ಲ ಆದರೆ (R) ಸರಿಯಾಗಿದೆ

(D) (A) ಸರಿಯಾಗಿದೆ ಆದರೆ (R) ಸರಿಯಾಗಿಲ್ಲ

**24.** ಈ ಕೆಳಗಿನವುಗಳನ್ನು ಹೊಂದಿಸಿರಿ :

| **ಪಟ್ಟಿ - I** | **ಪಟ್ಟಿ - II** |
|---|---|
| a. ದರ | i. ಉಪಯುಕ್ತತೆಗಳು |
| b. ಫೀ | ii. ದಳ್ಳಾಳಿ ಸೇವೆಗಳು |
| c. ಸುಂಕ | iii. ಸಾಗಾಟ |
| d. ರುಸುಮು | iv. ಸಲಹಾ ಸೇವೆ |

**ಸಂಕೇತಗಳು :**

| | a | b | c | d |
|---|---|---|---|---|
| (A) | i | ii | iii | iv |
| (B) | iv | iii | ii | i |
| (C) | iii | iv | i | ii |
| (D) | i | iv | iii | ii |

**25.** ಪ್ರಮುಖವಾಗಿ ಮಧ್ಯವರ್ತಿಗಳಿಗೆ ಭಡ್ತಿ ನೀಡುವ ಗುರಿ ಹೊಂದಿರುವ ಕಾರ್ಯಕ್ರಮಕ್ಕೆ ________ ಎನ್ನುತ್ತಾರೆ.

(A) ನೂಕು ತಂತ್ರ

(B) ಬಲತ್ಕಾರದ ತಂತ್ರ

(C) ಮಾರಾಟ ತಂತ್ರ

(D) ಎಳೆ ತಂತ್ರ

**20.** Put the buying process sequence in correct order.

i. Attitude

ii. Adoption

iii. Legitimisation

iv. Awareness

(A) iv, iii, ii, i

(B) i, ii, iii, iv

(C) iv, i, iii, ii

(D) iv, iii, i, ii

**21.** Efforts of a company to inform, communicate, promote and sell its products and services over the internet is known as

(A) E-Commerce

(B) E-Business

(C) E-Marketing

(D) E-Selling

**22.** **Assertion (A) :** Apple iphone is very expensive and it is the dream of the youth to have one.

**Reasoning (R) :** Apple follows product line pricing to fix the price of its phones.

**Codes :**

(A) Both (A) and (R) are incorrect

(B) Both (A) and (R) are correct

(C) (A) is correct but (R) is incorrect

(D) (A) is incorrect but (R) is correct

**23.** **Assertion (A) :** The demand curve of FMCG products in usually relatively inelastic.

**Reasoning (R) :** The FMCG companies usually follow skimming pricing as a strategy to fix the price.

**Codes :**

(A) Both (A) and (R) are incorrect

(B) Both (A) and (R) are correct

(C) (A) is incorrect and (R) is correct

(D) (A) is correct and (R) is incorrect

**24.** Match the following :

| **List – I** | **List – II** |
|---|---|
| a. Fare | i. Utilities |
| b. Fee | ii. Brokerage service |
| c. Tariff | iii. Transport |
| d. Commission | iv. Consultancy service |

**Codes :**

| | **a** | **b** | **c** | **d** |
|---|---|---|---|---|
| (A) | i | ii | iii | iv |
| (B) | iv | iii | ii | i |
| (C) | iii | iv | i | ii |
| (D) | i | iv | iii | ii |

**25.** A promotion programme aimed primarily at middlemen is called

(A) Push strategy

(B) Forced strategy

(C) Sales strategy

(D) Pull strategy

26. ಗ್ರಾಹಕರ ತೊಂದರೆಗಳನ್ನು ನಿವಾರಿಸಲು ಒಂದಕ್ಕೊಂದು ಸಂಬಂಧವಿರುವ ಸರಕು–ಸೇವೆಗಳನ್ನು ಮಾರಾಟ ಮಾಡುವುದಕ್ಕೆ ________ ಎನ್ನುತ್ತಾರೆ.
(A) ಸಂಪೂರ್ಣ ಮಾರಾಟ
(B) ವ್ಯಾಪಕ ಮಾರಾಟ
(C) ವ್ಯವಸ್ಥಿತ ಮಾರಾಟ
(D) ವ್ಯವಸ್ಥೆಯ ಮಾರಾಟ

27. ಮಾರಾಟಗಾರಿಕೆಯ ಪರಿಣಾಮವನ್ನು ಮತ್ತು ಕಾರ್ಯದ ಕ್ಷಮತೆಯನ್ನು ಹೆಚ್ಚಿಸಲು ವಿನ್ಯಾಸಗೊಳಿಸಿರುವ ಅತ್ಯಂತ ಸುಸಂಘಟಿತ ವಿತರಣಾ ಮಾರ್ಗವನ್ನು __________ ಎನ್ನುತ್ತಾರೆ.
(A) ಸಮತಲ ಮಾರಾಟಗಾರಿಕೆ ವ್ಯವಸ್ಥೆ
(B) ಪರ್ಯಾಯ ಮಾರಾಟಗಾರಿಕೆ ವ್ಯವಸ್ಥೆ
(C) ಸಮನಾಂತರ ಮಾರಾಟಗಾರಿಕೆ ವ್ಯವಸ್ಥೆ
(D) ಲಂಬ ಮಾರಾಟಗಾರಿಕೆ ವ್ಯವಸ್ಥೆ

28. ಒಂದು ಸರಕನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸುವುದಕ್ಕೂ ಮುನ್ನ ಗ್ರಾಹಕರ ಪ್ರತಿಕ್ರಿಯೆಯನ್ನು ತಿಳಿಯಲು ನಿಜವಾದ ಮಾರುಕಟ್ಟೆಯನ್ನು ಪ್ರತಿರೂಪಗೊಳಿಸುವುದಕ್ಕೆ ________ ಎನ್ನುತ್ತಾರೆ.
(A) ಮಾರಾಟಗಾರಿಕೆ ಪರೀಕ್ಷೆ
(B) ಸೂಕ್ಷ್ಮ ಮಾರಾಟಗಾರಿಕೆ
(C) ಅನುಕರಣೆ
(D) ಪರೀಕ್ಷೆ ಮಾರಾಟಗಾರಿಕೆ

29. ಸಂಪ್ರದಾಯಗಳು ಮತ್ತು ಆಚಾರಗಳನ್ನು ನಂಬುವ ಗ್ರಾಹಕರನ್ನು ________ ಎನ್ನುತ್ತಾರೆ.
(A) ಆಚಾರಗಳ ಗ್ರಾಹಕರು
(B) ಸಾಂಪ್ರದಾಯಿಕ ಗ್ರಾಹಕರು
(C) ಜಾಗರೂಕ ಗ್ರಾಹಕರು
(D) ಗತಿವಿಳಂಬಕರು

30. ಕೆಲವೇ ಗ್ರಾಹಕರೊಂದಿಗೆ ದೀರ್ಘಕಾಲದ, ಪರಿಣಾಮಕಾರಿ ವೆಚ್ಚದ, ಪರಸ್ಪರರಿಗೆ ಅನುಕೂಲವಾಗುವಂತಹ ನಂಬಿಕೆಯೆಡೆಗೆ ಮುನ್ನಡೆಯುವ ಪ್ರಕ್ರಿಯೆಗೆ ________ ಎನ್ನುತ್ತಾರೆ.
(A) ಸಂಬಂಧ ಮಾರಾಟಗಾರಿಕೆ
(B) ದೀರ್ಘಕಾಲದ ಮಾರಾಟಗಾರಿಕೆ
(C) ಆಯ್ಕೆಯ ಮಾರಾಟಗಾರಿಕೆ
(D) ನಂಬಿಕೆಯ ಮಾರಾಟಗಾರಿಕೆ

31. ನೌಕರರ ಕಾರ್ಯಕ್ಷಮತೆಯ ಮೌಲ್ಯಮಾಪನ ಮಾಡಲು ಯಾವ ಹಂತದಲ್ಲಿರುವವರು ಹೆಚ್ಚು ಸೂಕ್ತ ?
(A) ಸಹೋದ್ಯೋಗಿಗಳು
(B) ತಕ್ಷಣದ ಮೇಲಿನ ಅಧಿಕಾರಿ
(C) ಮೌಲ್ಯಮಾಪನ ಸಮಿತಿ
(D) ಮೇಲ್ಮಟ್ಟದ ನಿರ್ವಹಣೆ

32. **ಹೇಳಿಕೆ (A)** : ಆರೋಗ್ಯದ ಅಂಶಗಳು ನೌಕರನು ನಿರ್ವಹಿಸುವ ಕಾರ್ಯದಲ್ಲಿ ಒಳಗೊಂಡಿವೆ.

**ಹೇಳಿಕೆ (B)** : 'ವೈ' ವಿಚಾರ ಸರಣಿಯು ಮನುಷ್ಯರ ಗುಣಸ್ವಭಾವದ ಬಗ್ಗೆ ಆಶಾಭಾವವನ್ನು ಹೊಂದಿದೆ.

**ಸಂಕೇತಗಳು :**
(A) ಹೇಳಿಕೆಗಳು (A) ಮತ್ತು (B) ಎರಡೂ ಸರಿಯಾಗಿವೆ
(B) ಹೇಳಿಕೆಗಳು (A) ಮತ್ತು (B) ಎರಡೂ ಸರಿಯಾಗಿಲ್ಲ
(C) ಹೇಳಿಕೆ (A) ಸರಿಯಾಗಿದೆ ಮತ್ತು (B) ಸರಿಯಾಗಿಲ್ಲ
(D) ಹೇಳಿಕೆ (A) ಸರಿಯಾಗಿಲ್ಲ ಮತ್ತು (B) ಸರಿಯಾಗಿದೆ

**26.** Selling a total package of related goods and services to solve a customer's problem is called

(A) Complete selling

(B) Comprehensive selling

(C) Systematic selling

(D) System selling

**27.** A highly coordinated distribution channel designed to improve operating efficiency and marketing effectiveness is called

(A) Horizontal marketing system

(B) Alternative marketing system

(C) Parallel marketing system

(D) Vertical marketing system

**28.** Duplicating the real market conditions to measure consumers' response before large scale production of a product is known as

(A) Marketing test

(B) Micro marketing

(C) Simulation

(D) Test marketing

**29.** Consumers who are bound by traditions and conventions

(A) Conventional customers

(B) Traditional customers

(C) Cautious customers

(D) Laggards

**30.** The process of moving towards long term, cost-effective, mutually beneficial trust with selected customers is known as

(A) Relationship marketing

(B) Long-term marketing

(C) Selective marketing

(D) Trust marketing

**31.** Who is in a best position to observe and evaluate employee's performance ?

(A) Peers

(B) Immediate superior

(C) Rating committee

(D) Top management

**32.** **Statement (A) :** Hygiene factors are the intrinsic part of job carried out by an individual.

**Statement (B) :** Theory 'Y' represents the optimistic view about the human nature.

**Codes :**

(A) Both statements (A) and (B) are correct

(B) Both statements (A) and (B) are incorrect

(C) Statement (A) is correct and (B) is incorrect

(D) Statement (A) is incorrect and (B) is correct

**33.** ಈ ಕೆಳಗಿನವುಗಳನ್ನು ಹೊಂದಿಸಿರಿ :

| **ಪಟ್ಟಿ - I** | **ಪಟ್ಟಿ - II** |
|---|---|
| a. ಕಾರ್ಯಾತ್ಮಕ ಮೇಲ್ವಿಚಾರಕ | i. ಮ್ಯಾಕ್ಸ್ ವೆಬರ್ |
| b. ನಿರ್ದೇಶನದಲ್ಲಿ ಏಕತೆ | ii. ಡೇವಿಡ್ ಸಿ. ಮೆಕ್ಲೆಲ್ಯಾಂಡ್ |
| c. ಅಧಿಕಾರಶಾಹಿ | iii. ಎಫ್.ಡಬ್ಲ್ಯೂ. ಟೇಲರ್ |
| d. ಸಾಧಿಸುವಿಕೆಯ ಅವಶ್ಯಕತೆ | iv. ಹೆನ್ರಿ ಫಾಯಲ್ |

**ಸಂಕೇತಗಳು :**

| | **a** | **b** | **c** | **d** |
|---|---|---|---|---|
| (A) | iv | i | ii | iii |
| (B) | iii | i | iv | ii |
| (C) | ii | iii | iv | i |
| (D) | iii | iv | i | ii |

**34.** **ಪ್ರತಿಪಾದನೆ(A)** : ಮಾನವ ಸಂಪನ್ಮೂಲ ನಿರ್ವಹಣೆಯ ದೃಷ್ಟಿ ಸಕಾರಾತ್ಮಕವಾಗಿದೆ. ಅದು ಮುನ್ವರ್ತಿಸುವ ಗುಣವನ್ನು ಹೊಂದಿದೆ ಮತ್ತು ಸಿಬ್ಬಂದಿಯ ತೃಪ್ತಿಗೆ ಲಕ್ಷ್ಯಕೊಡುತ್ತದೆ.

**ತರ್ಕ (R)** : ಮಾನವ ನಿರ್ವಹಣೆಯ ತತ್ವವು ಹೆಚ್ಚು 'X' ವಿಚಾರ ಸರಣಿಯ ಮೇಲೆ ಅವಲಂಬಿತವಾಗಿದೆ.

**ಸಂಕೇತಗಳು :**

(A) (A) ಮತ್ತು (R) ಎರಡೂ ಸರಿಯಾಗಿವೆ

(B) (A) ಮತ್ತು (R) ಎರಡೂ ಸರಿಯಾಗಿಲ್ಲ

(C) (A) ಸರಿಯಾಗಿದೆ ಮತ್ತು (R) ಸರಿಯಾಗಿಲ್ಲ

(D) (A) ಸರಿಯಾಗಿಲ್ಲ ಮತ್ತು (R) ಸರಿಯಾಗಿದೆ

**35.** ಮೌಲ್ಯಮಾಪನ ಮಾಡುವ ವ್ಯಕ್ತಿಯ ಮೌಲ್ಯಮಾಪನವನ್ನು ಪ್ರಭಾವಿಸುವ ಒಂದು ಸಾಮಾನ್ಯ ಅಂಶವನ್ನು________ ಎಂದು ಕರೆಯುತ್ತಾರೆ.

(A) ನನ್ನ ಹಾಗೆ ಪರಿಣಾಮ

(B) ಪಕ್ಷಪಾತ

(C) ಪ್ರಭಾವಳಿಯ ಪರಿಣಾಮ

(D) ಒಂದೇ ತೆರನಾದ ಅಂಶ

**36.** ಕಾರ್ಯ ವಿಶ್ಲೇಷಣೆಯು ಕೆಳಗಿನ ಯಾವುದನ್ನು ಒಳಗೊಂಡಿದೆ?

(A) ಕಾರ್ಯ ವಿನ್ಯಾಸ

(B) ಕಾರ್ಯ ಅನುಕ್ರಮ

(C) ಕಾರ್ಯ ವಿವರಣೆ

(D) ಕಾರ್ಯ ತೃಪ್ತಿ

**37.** ಕಾರ್ಯದ ಸಮತಲ ಹಿಗ್ಗುವಿಕೆಯನ್ನು __________ ಎಂದು ಕರೆಯುತ್ತಾರೆ.

(A) ಕಾರ್ಯ ಪುಷ್ಟಿಗೊಳಿಸುವಿಕೆ

(B) ಕಾರ್ಯ ಒಳಗೊಳ್ಳುವಿಕೆ

(C) ಕಾರ್ಯ ತಿರುಗಿಸುವಿಕೆ

(D) ಕಾರ್ಯ ವಿಸ್ತರಿಸುವಿಕೆ

**38.** ನೌಕರರ ಕ್ಷೇಮಾಭಿವೃದ್ಧಿ ಅಧಿಕಾರಿಯ ನೇಮಕವು________ ಯಡಿ ಆಜ್ಞೆಯಾಗಿದೆ.

(A) ಕೈಗಾರಿಕಾ ವ್ಯಾಜ್ಯದ ಕಾಯ್ದೆ

(B) ನೌಕರರ ರಾಜ್ಯ ವಿಮಾ ಕಾಯ್ದೆ

(C) ಫ್ಯಾಕ್ಟರಿಗಳ ಕಾಯ್ದೆ

(D) ನೌಕರರ ನಷ್ಟಪರಿಹಾರ ಕಾಯ್ದೆ

**39.** **ಪ್ರತಿಪಾದನೆ(A)** : ಉಮೇದುದಾರಿಕೆ ಕಾರ್ಯಕ್ರಮವು ಹೆಚ್ಚು ಬಳಸಲ್ಪಡುವ ಕಾರ್ಯರಹಿತ ತರಬೇತಿಯ ವಿಧಾನವಾಗಿದೆ.

**ತರ್ಕ (R)** : ಕಾರ್ಯಸಹಿತ ತರಬೇತಿ ನೀಡುವ ವಿಧಾನಗಳು ಕಾರ್ಯರಹಿತ ತರಬೇತಿ ವಿಧಾನಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿವೆ.

**ಸಂಕೇತಗಳು :**

(A) (A) ಮತ್ತು (R) ಎರಡೂ ಸರಿಯಾಗಿವೆ

(B) (A) ಮತ್ತು (R) ಎರಡೂ ಸರಿಯಾಗಿಲ್ಲ

(C) (A) ಸರಿಯಾಗಿದೆ ಮತ್ತು (R) ಸರಿಯಾಗಿಲ್ಲ

(D) (A) ಸರಿಯಾಗಿಲ್ಲ ಮತ್ತು (R) ಸರಿಯಾಗಿದೆ

**33.** Match the following :

| | List – I | | List – II |
|---|---|---|---|
| a. | Functional foremanship | i. | Max Weber |
| b. | Unity of direction | ii. | David C. McClelland |
| c. | Bureaucracy | iii. | F.W. Taylor |
| d. | Need achievement | iv. | Henry Fayol |

**Codes :**

| | a | b | c | d |
|---|---|---|---|---|
| (A) | iv | i | ii | iii |
| (B) | iii | i | iv | ii |
| (C) | ii | iii | iv | i |
| (D) | iii | iv | i | ii |

**34. Assertion (A) :** Focus of human resources management is positive. It is proactive in nature and pays attention to employee satisfaction.

**Reasoning (R) :** The personnel management philosophy relied very much on the theory 'X' approach.

**Codes :**

(A) Both (A) and (R) are correct

(B) Both (A) and (R) are incorrect

(C) (A) is correct and (R) is incorrect

(D) (A) is incorrect and (R) is correct

**35.** One factor influencing the rater's general impression on ratings of other factors is called

(A) Like me effect

(B) Bias

(C) Halo effect

(D) Similarity factor

**36.** Job analysis involves

(A) Job design

(B) Job order

(C) Job description

(D) Job satisfaction

**37.** A horizontal expansion of the job is termed as

(A) Job enrichment

(B) Job involvement

(C) Job rotation

(D) Job enlargement

**38.** Appointment of labour welfare officer is mandatory according to

(A) Industrial Disputes Act

(B) Employee's State Insurance Act

(C) Factories Act

(D) Workmen Compensation Act

**39. Assertion (A) :** Apprenticeship programme is one of the widely used off-the-job training method.

**Reasoning (R) :** On-the-job training methods are more effective than off-the-job training methods.

**Codes :**

(A) Both (A) and (R) are correct

(B) Both (A) and (R) are incorrect

(C) (A) is correct and (R) is incorrect

(D) (A) is incorrect and (R) is correct

**40.** ಅನುಭವಗ್ರಾಹಿಯಾದ ತರಬೇತಿಯನ್ನು__________ ಎಂದು ಕರೆಯುತ್ತಾರೆ.

(A) ಕಾರ್ಯಕಾರಿ ತರಬೇತಿ

(B) T-ಗುಂಪಿನ ತರಬೇತಿ

(C) ಬುಟ್ಟಿಯೊಳಗಣ ಅಭ್ಯಾಸ

(D) ಆಟಗಳ ವಿಚಾರ ಸರಣಿ

**41.** ಈ ಕೆಳಗಿನವುಗಳನ್ನು ಹೊಂದಿಸಿರಿ :

| **ಪಟ್ಟಿ - I** | **ಪಟ್ಟಿ - II** |
|---|---|
| a. ಕಾರ್ಯ ಸರಳೀಕರಣ | i. ಸಮತಲವಾಗಿ ಕಾರ್ಯವನ್ನು ಹಿಗ್ಗಿಸುವುದು |
| b. ಕಾರ್ಯ ವಿಸ್ತರಣ | ii. ಕಾರ್ಯದ ಪರಿಮಾಣವನ್ನು ಹೆಚ್ಚಿಸುವುದು |
| c. ಕಾರ್ಯ ತಿರುಗಿಸುವಿಕೆ | iii. ಕಾರ್ಯವನ್ನು ಸಣ್ಣ-ಸಣ್ಣ ಭಾಗಗಳಾಗಿ ವಿಂಗಡಿಸುವುದು |
| d. ಕಾರ್ಯ ಪುಷ್ಟೀಕರಣ | iv. ನೌಕರನು ಒಂದು ಕೆಲಸದಿಂದ ಇನ್ನೊಂದು ಕೆಲಸ ನಿರ್ವಹಿಸಲು ಸಾಗುವುದು |

**ಸಂಕೇತಗಳು :**

| | a | b | c | d |
|---|---|---|---|---|
| (A) | ii | iii | iv | i |
| (B) | iv | iii | i | ii |
| (C) | iii | i | iv | ii |
| (D) | ii | i | iv | iii |

**42.** ಕಾರ್ಯದ ಮೌಲ್ಯದ ಆಧಾರದ ಮೇಲೆ ಸಂಬಳವನ್ನು ನಿಗದಿಪಡಿಸುವ ಪ್ರಕ್ರಿಯೆಯನ್ನು__________ ಎಂದು ಕರೆಯುತ್ತಾರೆ.

(A) ಕಾರ್ಯ ಬೆಲೆನಿಗದಿ

(B) ಪ್ರತಿಫಲ ಯೋಜನೆ

(C) ಕಾರ್ಯ ಹೋಲಿಸಲಾದ ಸಂಬಳ

(D) ಕೂಲಿ ನಿರ್ಧರಣೆ

**43.** ಭಾರತೀಯ ಕೂಲಿಕಾರರ ಪ್ರಥಮ ಸಂಘವು __________ ರಿಂದ ಸ್ಥಾಪಿಸಲ್ಪಟ್ಟಿತು.

(A) ಗಾಂಧೀಜಿ

(B) ಎನ್.ಎಂ. ಲೋಖಂಡೆ

(C) ಮೋಹನ್‌ರಾಯ್

(D) ಲೋಕಮಾನ್ಯ ತಿಲಕ್

**44.** ಅಖಿಲ ಭಾರತೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ __________ ವರ್ಷದಲ್ಲಿ ಪ್ರಾರಂಭಗೊಂಡಿತು.

(A) 1878

(B) 1920

(C) 1923

(D) 1953

**45.** **ಹೇಳಿಕೆ (A)** : ಹೋಲಿಸಬಹುದಾದ ಕಾರ್ಯಗಳಿಗೆ ಹೋಲಿಸಬಹುದಾದ ಸಂಬಳವನ್ನು ನೀಡಲು ಧಣಿಗಳು ಸಾಮಾನ್ಯವಾಗಿ ಇತರೆ ಸಂಸ್ಥೆಗಳ ಸಮೀಕ್ಷೆ ನಡೆಸುತ್ತಾರೆ.

**ಹೇಳಿಕೆ (B)** : ಹೆಚ್ಚಿನ ಮಟ್ಟಿನ ಧಣಿಗಳು ಒಂದೇ ಹಂತದಲ್ಲಿನ ಕಾರ್ಯಗಳಿಗೆ ಒಂದೇ ದರದ ವೇತನವನ್ನು ನೀಡುತ್ತಾರೆ.

**ಸಂಕೇತಗಳು :**

(A) ಹೇಳಿಕೆ (A) ಮತ್ತು (B) ಎರಡೂ ಸರಿಯಾಗಿವೆ

(B) ಹೇಳಿಕೆ (A) ಮತ್ತು (B) ಎರಡೂ ಸರಿಯಾಗಿಲ್ಲ

(C) ಹೇಳಿಕೆ (A) ಸರಿಯಾಗಿದೆ ಮತ್ತು (B) ಸರಿಯಾಗಿಲ್ಲ

(D) ಹೇಳಿಕೆ (A) ಸರಿಯಾಗಿಲ್ಲ ಮತ್ತು (B) ಸರಿಯಾಗಿದೆ

**40.** Sensitivity training is also known as

(A) Operative training

(B) T-group training

(C) In basket exercise

(D) Theory of games

**41.** Match the following :

| | **List – I** | | **List – II** |
|---|---|---|---|
| a. | Job simplification | i. | Expanding jobs horizontally |
| b. | Job enlargement | ii. | Increasing job content |
| c. | Job rotation | iii. | Dividing jobs into smaller components |
| d. | Job enrichment | iv. | Movement of employee from one job to another |

**Codes :**

| | **a** | **b** | **c** | **d** |
|---|---|---|---|---|
| (A) | ii | iii | iv | i |
| (B) | iv | iii | i | ii |
| (C) | iii | i | iv | ii |
| (D) | ii | i | iv | iii |

**42.** The process of determining pay depending on the worth of a job is called

(A) Job pricing

(B) Compensation plan

(C) Job comparison pay

(D) Wage fixation

**43.** The first association of Indian workers was founded by

(A) Gandhiji

(B) N. M. Lokhande

(C) Mohan Roy

(D) Lokamanya Tilak

**44.** The All India Trade Union Congress was founded during

(A) 1878

(B) 1920

(C) 1923

(D) 1953

**45.** **Statement (A)** : Employers usually survey other firms to see if they are paying comparable pay for comparable jobs.

**Statement (B)** : Most employers pay just one pay rate for all jobs in a particular pay grade.

**Codes :**

(A) Both statements (A) and (B) are correct

(B) Both statements (A) and (B) are incorrect

(C) Statement (A) is correct and (B) is incorrect

(D) Statement (A) is incorrect and (B) is correct

**46.** 'ವ್ಯಾಪಾರವು ಸಕಾರಾತ್ಮಕ ಒಟ್ಟು ಆಟ', ಇದು_______ಗೆ ಸಂಬಂಧಿಸಿದೆ.

(A) ಹೋಲಿಕೆಯ ಅನುಕೂಲ ವಿಚಾರ ಸರಣಿ

(B) ಹೆಕ್‌ಶರ್–ಓಹ್ಲಿನ್ ವಿಚಾರ ಸರಣಿ

(C) ಹೊಸ ವ್ಯಾಪಾರ ವಿಚಾರ ಸರಣಿ

(D) ಸರಕಿನ ಜೀವನಚಕ್ರ ವಿಚಾರ ಸರಣಿ

**47.** ಸ್ಥಳೀಯ ಅಂತರ್ಗತ ಅವಶ್ಯಕತೆಗಳು __________ಗೆ ಸಂಬಂಧಿಸಿವೆ.

(A) ಟಿ.ಆರ್.ಐ.ಪಿ.ಎಸ್.

(B) ಟಿ.ಆರ್.ಐ.ಎಂ.ಎಸ್.

(C) ಜಿ.ಎ.ಟಿ.ಎಸ್.

(D) ಎಂ.ಎಫ್.ಎ.

**48.** ಶೈಶವಾವಸ್ಥೆಯ ಕೈಗಾರಿಕೆಗಳು ಎಂಬ ವಾದವು_______ ಸಂಬಂಧಿಸಿದೆ.

(A) ಮುಕ್ತ ವ್ಯಾಪಾರಕ್ಕೆ (B) ಉತ್ತೇಜಕಗಳಿಗೆ

(C) ತೆರಿಗೆಗಳಿಗೆ (D) ರಕ್ಷಣೆಗೆ

**49.** ಎಫ್.ಐ.ಪಿ.ಬಿ.ಯು ___________ ಸಂಬಂಧಿಸಿದೆ.

(A) ಎಫ್.ಐ.ಐ.ಗೆ

(B) ಎಫ್.ಡಿ.ಐ.ಗೆ

(C) (A) ಮತ್ತು (B) ಎರಡಕ್ಕೂ

(D) ಭಾಗವಹಿಸುವಿಕೆಯ ಪಟ್ಟಿಗೆ

**50.** ''ಬಹುರಾಷ್ಟ್ರೀಯ ಸಂಸ್ಥೆಗಳು ಆತಿಥೇಯ ರಾಷ್ಟ್ರಗಳನ್ನು ಸ್ವ–ಹಿತಕ್ಕಾಗಿ ಬಳಸಿಕೊಳ್ಳುವ ಪರಮಾಧಿಕಾರವುಳ್ಳ ಸಾಧನ''.

(A) ತೀವ್ರ ಸುಧಾರಣೆಯ ದೃಷ್ಟಿ

(B) ವಾಸ್ತವಿಕ ರಾಷ್ಟ್ರೀಯ ದೃಷ್ಟಿ

(C) ರಾಷ್ಟ್ರೀಯ ದೃಷ್ಟಿ

(D) ಮುಕ್ತ ಮಾರುಕಟ್ಟೆ ದೃಷ್ಟಿ

**51.** ಈ ಕೆಳಗಿನ ವಿವಿಧ ಹಂತಗಳ ಆರ್ಥಿಕ ಸಮಗ್ರತೆಯನ್ನು ಕೆಳಗಿನಿಂದ ಮೇಲಿನ ಹಂತದ ಅನುಕ್ರಮದಲ್ಲಿ ಜೋಡಿಸಿ.

i. ಒಂದೇ ಮಾರುಕಟ್ಟೆ

ii. ಮುಕ್ತ ವ್ಯಾಪಾರ ಸ್ಥಳ

iii. ಸುಂಕದ ಒಕ್ಕೂಟ

iv. ರಾಜಕೀಯ ಒಕ್ಕೂಟ

v. ಆರ್ಥಿಕ ಒಕ್ಕೂಟ

(A) i, ii, iii, iv, v

(B) v, iii, iv, ii, i

(C) ii, iii, i, v, iv

(D) iv, v, i, iii, ii

**52.** ನಿರ್ದಿಷ್ಟ ವಿದೇಶೀ ವಿನಿಮಯವನ್ನು ಏಕಕಾಲದಲ್ಲಿ ಬೇರೆ ಬೇರೆ ಮೌಲ್ಯದ ದಿನಾಂಕಗಳಲ್ಲಿ ಮಾರುವ ಮತ್ತು ಕೊಳ್ಳುವುದಕ್ಕೆ_________ಎನ್ನುತ್ತಾರೆ.

(A) ಫ್ಯೂಚರ್ಸ್ (B) ಆಪ್ಶನ್ಸ್

(C) ಅದಲು ಬದಲು (D) ವರ್ಗಾಯಿಸುವುದು

**53.** ಬ್ಯಾಂಡ್ ವ್ಯಾಗನ್ ಪರಿಣಾಮವು ____________ ಸಂಬಂಧಿಸಿದೆ.

(A) ದೀರ್ಘಾವಧಿ ನಿಲುವುಗಳನ್ನು ತೆಗೆದುಕೊಳ್ಳುವುದಕ್ಕೆ

(B) ನಾಣ್ಯಗಳ ಅದಲುಬದಲಿಗೆ

(C) ಹೂಡಿಕೆದಾರನ ಮನೋಸ್ಥಿತಿಗೆ

(D) ಭವಿಷ್ಯದ ಕರಾರುಗಳು

**54.** ಬಿಲ್ ಆಫ್ ಲ್ಯಾಡಿಂಗ್ ಎಂದರೆ

(A) ಸ್ವೀಕೃತಿ

(B) ಒಂದು ಕರಾರು

(C) ಒಂದು ದಾಖಲೆಯ ಹೆಸರು

(D) ಮೇಲಿನ ಎಲ್ಲವೂ

**55.** ಇ.ಸಿ.ಜಿ.ಸಿ. ಯು_________ ಗೆ ಸಂಬಂಧಿಸಿದೆ.

(A) ಸಾಲಕ್ಕೆ (B) ವಿಮೆ

(C) ಸಾಗಣೆ (D) ಎಲ್ಲವುಗಳಿಗೆ

**46.** "Trade is a positive sum game" related to

(A) Theory of comparative advantage

(B) Heckscher-ohlin theory

(C) New trade theory

(D) Product life cycle theory

**47.** Local content requirement is related to

(A) TRIPS

(B) TRIMS

(C) GATS

(D) MFA

**48.** The infant industry argument is related to

(A) Free trade (B) Subsidies

(C) Taxes (D) Protection

**49.** FIPB is related to

(A) FII

(B) FDI

(C) Both (A) and (B)

(D) Participatory notes

**50.** "Multi National Enterprise is an imperialist tool for exploiting host countries".

(A) Radical view

(B) Pragmatic Nationalist view

(C) Nationalist view

(D) Free market view

**51.** Put the following levels of economic integration from the lowest to the highest order.

i. Common market

ii. Free trade area

iii. Customs union

iv. Political union

v. Economic union

(A) i, ii, iii, iv, v

(B) v, iii, iv, ii, i

(C) ii, iii, i, v, iv

(D) iv, v, i, iii, ii

**52.** Simultaneous purchase and sale of a given foreign exchange for two different value dates

(A) Futures (B) Options

(C) Swaps (D) Hedging

**53.** Bandwagon effect is related to

(A) Taking long positions

(B) Currency swaps

(C) Investor psychology

(D) Forward contracts

**54.** Bill of lading is a

(A) Receipt

(B) A contract

(C) A document title

(D) All the above

**55.** ECGC is concerned with

(A) Credit (B) Insurance

(C) Transport (D) All the above

56. ಸರಕು–ಸೇವೆಗಳನ್ನು ಹಣಕ್ಕೆ ಮಾರಲು ಬಾರದಿದ್ದಾಗ ಇತರೆ ಸರಕು ಮತ್ತು ಸೇವೆಗಳಿಗೆ ಮಾರುವುದಕ್ಕೆ __________ ಎನ್ನುತ್ತಾರೆ.
(A) ಗಡಂಗು
(B) ಪ್ರತಿಯಾದ ವ್ಯಾಪಾರ
(C) ರೂಪಾಯಿ ಮಾನದಂಡದ ವ್ಯಾಪಾರ
(D) ಬದಲು ವ್ಯಾಪಾರ

57. **ಹೇಳಿಕೆ (A)** : ಡಬ್ಲ್ಯೂ.ಟಿ.ಓ. ದ ಉದ್ದೇಶವು ಸದಸ್ಯ ರಾಷ್ಟ್ರಗಳ ಮಧ್ಯೆ ವ್ಯಾಪಾರವನ್ನು ವೃದ್ಧಿಸುವುದು.

**ಹೇಳಿಕೆ (B)** : ಪರಿಮಾಣಾತ್ಮಕ ನಿರ್ಬಂಧಗಳನ್ನು ತೆಗೆದುಹಾಕಿದರೆ ಸುಂಕ ಮುಕ್ತ ಆಯಾತಕ್ಕೆ ಸಹಾಯವಾಗುತ್ತದೆ ಮತ್ತು ವ್ಯಾಪಾರದ ವಿಸ್ತರಣೆಯಾಗುತ್ತದೆ.

**ಸಂಕೇತಗಳು :**
(A) ಹೇಳಿಕೆ (A) ಮತ್ತು (B) ಎರಡೂ ಸರಿಯಾಗಿವೆ
(B) ಹೇಳಿಕೆ (A) ಸರಿಯಾಗಿದೆ ಆದರೆ ಹೇಳಿಕೆ (B) ಸರಿಯಾಗಿಲ್ಲ
(C) ಹೇಳಿಕೆ (A) ಮತ್ತು (B) ಎರಡೂ ಸರಿಯಾಗಿಲ್ಲ
(D) ಹೇಳಿಕೆ (A) ಸರಿಯಾಗಿಲ್ಲ ಮತ್ತು ಹೇಳಿಕೆ (B) ಸರಿಯಾಗಿದೆ

58. ಈ ಕೆಳಗಿನವುಗಳನ್ನು ಹೊಂದಿಸಿರಿ :

| ಪಟ್ಟಿ – A | ಪಟ್ಟಿ – B |
|---|---|
| a. ತಾಂತ್ರಿಕ ಆವಿಷ್ಕಾರಗಳಿಗೆ ರಕ್ಷಣೆ | i. ಕೈಗಾರಿಕಾ ವಿನ್ಯಾಸಗಳು |
| b. ಕಲಾತ್ಮಕ ಸೃಷ್ಟಿಯನ್ನು ಉಪಯೋಗಿಸಲು ಪ್ರತ್ಯೇಕವಾದ ಹಕ್ಕು | ii. ವ್ಯಾಪಾರದ ಗುರುತುಗಳು |
| c. ನಿರಂತತೆಯ ರಕ್ಷಣೆ | iii. ಗ್ರಂಥಸ್ವಾಮ್ಯ |
| d. 15 ವರ್ಷಗಳವರೆಗೆ ಇರುವುದು | iv. ಹಕ್ಕುಗಳು |

**ಸಂಕೇತಗಳು :**

| | a | b | c | d |
|---|---|---|---|---|
| (A) | iii | ii | iv | i |
| (B) | i | ii | iii | iv |
| (C) | ii | iii | i | iv |
| (D) | iv | iii | ii | i |

59. **ಪ್ರತಿಪಾದನೆ (A)** : ಬಹುರಾಷ್ಟ್ರೀಯ ಕಂಪನಿಗಳು ವಶಪಡಿಸಿಕೊಳ್ಳುವಿಕೆಯನ್ನು ವಿದೇಶೀ ಮಾರುಕಟ್ಟೆಯೊಳಗೆ ಪ್ರವೇಶ ಮಾಡುವುದಕ್ಕೆ ತಂತ್ರವನ್ನಾಗಿ ಬಳಸಿಕೊಳ್ಳುತ್ತವೆ.

**ತರ್ಕ (R)** : ಹಸಿರು ಸೀಮೆ ಹೂಡಿಕೆಯು ಹಣದ ಹರಿಯುವಿಕೆಯನ್ನು ಸೃಷ್ಟಿಸಲು ಅಲ್ಪ ಸಮಯವನ್ನು ತೆಗೆದುಕೊಳ್ಳುತ್ತವೆ.

**ಸಂಕೇತಗಳು :**
(A) (A) ಸರಿಯಾಗಿದೆ ಮತ್ತು (R) ಸರಿಯಾಗಿಲ್ಲ
(B) (A) ಸರಿಯಾಗಿಲ್ಲ ಮತ್ತು (R) ಸರಿಯಾಗಿದೆ
(C) (A) ಮತ್ತು (R) ಎರಡೂ ಸರಿಯಾಗಿಲ್ಲ
(D) (A) ಮತ್ತು (R) ಎರಡೂ ಸರಿಯಾಗಿವೆ

60. **ಪ್ರತಿಪಾದನೆ (A)** : ಭಾರತವು ವಿನಿಮಯ ದರಗಳನ್ನು ನಿರ್ಧರಿಸಲು ನಿರ್ವಹಿಸಿದ ಅಸ್ಥಿರ ದರಗಳನ್ನು ಅನುಸರಿಸುತ್ತದೆ.

**ತರ್ಕ (R)** : ವಿನಿಮಯ ದರಗಳಲ್ಲಿ ಹೆಚ್ಚು ಚಂಚಲತೆ ಇದ್ದರೆ ಅಂತಹ ಚಂಚಲತೆಯನ್ನು ಕಡಿಮೆ ಮಾಡಲು ಆರ್.ಬಿ.ಐ.ಯು ಮಧ್ಯಪ್ರವೇಶ ಮಾಡುತ್ತದೆ.

**ಸಂಕೇತಗಳು :**
(A) (A) ಮತ್ತು (R) ಎರಡೂ ಸರಿಯಾಗಿವೆ
(B) (A) ಮತ್ತು (R) ಎರಡೂ ಸರಿಯಾಗಿಲ್ಲ
(C) (A) ಸರಿಯಾಗಿದೆ ಮತ್ತು (R) ಸರಿಯಾಗಿಲ್ಲ
(D) (A) ಸರಿಯಾಗಿಲ್ಲ ಮತ್ತು (R) ಸರಿಯಾಗಿದೆ

61. ಪರಿಚ್ಛೇದ 80 C, 80 CCC ಹಾಗೂ 80 CCDಗಳಡಿ ಕಳೆಯಬಹುದಾದ ಗರಿಷ್ಠ ಮೊತ್ತ
(A) Rs. 1,00,000
(B) Rs. 50,000
(C) Rs. 1,50,000
(D) Rs. 2,50,000

**56.** "Trade goods and services for other goods and services when they cannot be traded for money" is known as

(A) Entrepot

(B) Counter trade

(C) Trade in rupee terms

(D) Switch trading

**57.** **Statement (A)** : The objective of WTO is to expand trade among the member nations.

**Statement (B)** : Removal of Quantitative restrictions help in duty free imports and hence expansion of trade.

**Codes :**

(A) Both Statements (A) and (B) are correct

(B) Statement (A) is correct but Statement (B) is incorrect

(C) Both Statements (A) and (B) are incorrect

(D) Statement (A) is incorrect and Statement (B) is correct

**58.** Match the following :

| | **List – A** | | **List – B** |
|---|---|---|---|
| a. | Protection for technological innovations | i. | Industrial designs |
| b. | Exclusive right to use artistic works | ii. | Trade marks |
| c. | Protected in perpetuity | iii. | Copy rights |
| d. | Last for a maximum of 15 years | iv. | Patents |

**Codes :**

| | **a** | **b** | **c** | **d** |
|---|---|---|---|---|
| (A) | iii | ii | iv | i |
| (B) | i | ii | iii | iv |
| (C) | ii | iii | i | iv |
| (D) | iv | iii | ii | i |

**59.** **Assertion (A) :** MNCs try to adopt acquisition as a strategy to enter the foreign markets.

**Reasoning (R) :** Green field investment takes a short-time to generate cash flow.

**Codes :**

(A) (A) is correct and (R) is incorrect

(B) (A) is incorrect and (R) is correct

(C) Both (A) and (R) are incorrect

(D) Both (A) and (R) are correct

**60.** **Assertion (A) :** India is following managed floating rates system for determination of exchange rates.

**Reasoning (R) :** If there is high volatility in the exchange rate, the RBI intervenes in the market to reduce the volatility.

**Codes :**

(A) Both (A) and (R) are correct

(B) Both (A) and (R) are incorrect

(C) (A) is correct and (R) is incorrect

(D) (A) is incorrect and (R) is correct

**61.** Aggregate amount of deduction under sections 80 C, 80 CCC and 80 CCD cannot exceed

(A) Rs. 1,00,000

(B) Rs. 50,000

(C) Rs. 1,50,000

(D) Rs. 2,50,000

**62.** ಪರಿಚ್ಛೇದ 80 DD ಯ ಸೌಲಭ್ಯ ಪಡೆಯಲು ಒಬ್ಬ ತೆರಿಗೆದಾರನು

(A) ವ್ಯಕ್ತಿ ಅಥವಾ HUF ಆಗಿರಬೇಕು

(B) ಭಾರತದ ನಿವಾಸಿಯಾಗಿರಬೇಕು

(C) ಆತನಿಗೆ ಅವಲಂಬಿತ ಅಂಗವಿಕಲನಿರಬೇಕು

(D) ಅನಿವಾಸಿ ಭಾರತೀಯನಾಗಿರಬೇಕು

**63.** ನಿಯಮಿತ ಜವಾಬ್ದಾರಿ ಪಾಲುಗಾರಿಕೆ ಸಂಸ್ಥೆಯು ಶೇ. ________ ರಷ್ಟು ತೆರಿಗೆ ಕಟ್ಟಬೇಕು.

(A) 10 (B) 20

(C) 30 (D) 40

**64.** ಭಾರತದಲ್ಲಿ ಆದಾಯ ತೆರಿಗೆಗೆ ಒಂದು ಕಂಪೆನಿಯ ವಾಸ ಸ್ಥಿತಿಯನ್ನು ಈ ಕೆಳಗಿನ ಆಧಾರದ ಮೇಲೆ ನಿರ್ಧರಿಸಲಾಗುವುದು

(A) ಕಂಪೆನಿಯ ನಿರ್ವಹಣೆ ಹಾಗೂ ನಿಯಂತ್ರಣ

(B) ಕಂಪೆನಿಯ ಸ್ವಭಾವ

(C) ಕಂಪೆನಿಯ ಹಿಂದಿನ ವರ್ಷದ ವಾಸ ಸ್ಥಿತಿ

(D) ಕಂಪೆನಿಯ ಮಾಲೀಕತ್ವ

**65.** ಈ ಕೆಳಗಿನವುಗಳನ್ನು ಹೊಂದಿಸಿ :

| **ಪಟ್ಟಿ - I** | **ಪಟ್ಟಿ - II** |
|---|---|
| a. GSTR – 1 | i. ತ್ರೈಮಾಸಿಕ ರಿಟರ್ನ್ಸ್ |
| b. GSTR – 2 | ii. ನಿರ್ಗಮನ ಪೂರೈಕೆ |
| c. GSTR – 3 | iii. ಆಗಮನ ಪೂರೈಕೆ |
| d. GSTR – 4 | iv. ಮಾಸಿಕ ರಿಟರ್ನ್ಸ್ |

**ಸಂಕೇತಗಳು :**

| | **a** | **b** | **c** | **d** |
|---|---|---|---|---|
| (A) | ii | iii | iv | i |
| (B) | ii | iii | i | iv |
| (C) | iii | ii | i | iv |
| (D) | iv | ii | iii | i |

**66.** ಈ ಕೆಳಗಿನವರಲ್ಲಿ ಯಾರು ಪರಿಚ್ಛೇದ 54ರ ಸೌಲಭ್ಯಕ್ಕೆ ಅರ್ಹರು ?

(A) ಎಲ್ಲಾ ತೆರಿಗೆದಾರರು

(B) ವ್ಯಕ್ತಿ ತೆರಿಗೆದಾರರು ಮಾತ್ರ

(C) ವ್ಯಕ್ತಿಗಳು ಹಾಗೂ ಹಿಂದೂ ಅವಿಭಾಜ್ಯ ಕುಟುಂಬ

(D) ಹಿಂದೂ ಅವಿಭಾಜ್ಯ ಕುಟುಂಬ ಮಾತ್ರ

**67.** **ಹೇಳಿಕೆ (A)** : ಭಾರತದಿಂದ ನಿಯಂತ್ರಿಸಲ್ಪಟ್ಟ ಒಂದು ಉದ್ದಿಮೆಗೆ ಸಂದ ವಿದೇಶಿ ಆದಾಯದ ಮೇಲೆ ನಿವಾಸಿ ಮಾತ್ರ ತೆರಿಗೆ ಪಾವತಿಸಬೇಕಾಗುತ್ತದೆ.

**ಹೇಳಿಕೆ (B)** : ಯಾವುದೇ ತೆರಿಗೆದಾರನು ಪರಿಚ್ಛೇದ 80 Dಯ ಸೌಲಭ್ಯವನ್ನು ಪಡೆಯಬಹುದಾಗಿದೆ.

**ಸಂಕೇತಗಳು :**

(A) ಹೇಳಿಕೆ (A) ಸರಿ, (B) ತಪ್ಪು

(B) ಹೇಳಿಕೆ (A) ತಪ್ಪು, (B) ಸರಿ

(C) ಎರಡೂ ಹೇಳಿಕೆಗಳು ತಪ್ಪು

(D) ಎರಡೂ ಹೇಳಿಕೆಗಳು ಸರಿ

**68.** ಒಂದು ಕಂಪೆನಿಯಲ್ಲಿ ಉದ್ಯೋಗಿಯ ಮೂಲ ವೇತನ ಮಾಸಿಕ ರೂ. 60,000, ಮನೆ ಬಾಡಿಗೆ ಭತ್ಯೆ (ಮೂಲ ವೇತನದ ಶೇ. 20) ಹಾಗೂ ಮಾಸಿಕ ಬಾಡಿಗೆ ರೂ. 8,000 ಪಡೆಯುತ್ತಿದ್ದರೆ ಆತನಿಗೆ ಸಿಗುವ ಮನೆ ಬಾಡಿಗೆ ಭತ್ಯದ ತೆರಿಗೆ ವಿನಾಯಿತಿಯು ಎಷ್ಟು ?

(A) ರೂ. 48,000 (B) ರೂ. 24,000

(C) ರೂ. 1,20,000 (D) ರೂ. 96,000

**69.** ಯಾವುದೇ ಒಂದು ವರ್ಷದ ತೆರಿಗೆ ಸಾಲಿನಲ್ಲಿ ಮಿಕ್ಕ ಬಾಕಿ ಸವಕಳಿಯನ್ನು ಎಷ್ಟು ವರ್ಷಗಳವರೆಗೆ ತೀರಿಸುವ ಸಲುವಾಗಿ ಮುಂದೂಡಬಹುದು ?

(A) 8 ವರ್ಷಗಳು

(B) 4 ವರ್ಷಗಳು

(C) 2 ವರ್ಷಗಳು

(D) ಅನಿಶ್ಚಿತ ಕಾಲದವರೆಗೆ

**62.** For the purpose of deduction U/S 80 DD, assessees

(A) is either an individual or HUF

(B) is resident in India

(C) has a dependent disable relative

(D) is non-resident in India

**63.** A limited liability partnership firm is taxable at the rate of

(A) 10% (B) 20%

(C) 30% (D) 40%

**64.** To levy corporate income tax in India, the company's residential status is decided on the basis of

(A) Company management and control

(B) Nature of the company

(C) Residential status of the company for the previous year

(D) Ownership of the company

**65.** Match the following :

| | **List – I** | | **List – II** |
|---|---|---|---|
| a. | GSTR – 1 | i. | Quarterly returns |
| b. | GSTR – 2 | ii. | Outward supply |
| c. | GSTR – 3 | iii. | Inward supply |
| d. | GSTR – 4 | iv. | Monthly returns |

**Codes :**

| | **a** | **b** | **c** | **d** |
|---|---|---|---|---|
| (A) | ii | iii | iv | i |
| (B) | ii | iii | i | iv |
| (C) | iii | ii | i | iv |
| (D) | iv | ii | iii | i |

**66.** Exemption U/S 54 is available to

(A) All assessees

(B) Individuals only

(C) Individual and HUF

(D) HUF only

**67.** **Statement (A)** : Income which accrue outside India from a business controlled from India is taxable is case of resident only.

**Statement (B)** : Deduction U/S 80 D is allowed to any assessee.

**Codes :**

(A) Statement (A) is correct, (B) is wrong

(B) Statement (A) is wrong, (B) is correct

(C) Both the Statements are wrong

(D) Both the statements are correct

**68.** The company is paying a basic salary of Rs. 60,000 pm, HRA (20% of basic pay), and rent of Rs. 8,000 pm to an employee. What is the HRA exemption from income tax for the employee ?

(A) Rs. 48,000 (B) Rs. 24,000

(C) Rs. 1,20,000 (D) Rs. 96,000

**69.** Unabsorbed depreciation which could not be set off in the same assessment year, can be carried forward for

(A) 8 years

(B) 4 years

(C) 2 years

(D) Indefinite period

**70.** **ಹೇಳಿಕೆ (A)** : ವಿದ್ಯಾ ತೆರಿಗೆಯನ್ನು ಎಲ್ಲಾ ತೆರಿಗೆದಾರರು ಕೊಡಬೇಕು.

**ಹೇಳಿಕೆ (B)** : ಭಾರತದಲ್ಲಿ ಪರಿಗಣಿಸಬಹುದಾದ ಸಂಚಿತ ಅಥವಾ ಉದಿಸಿದ ಆದಾಯವನ್ನು ಅನಿವಾಸಿಯು ಮಾತ್ರ ಪಾವತಿಸಬೇಕು.

**ಸಂಕೇತಗಳು :**

(A) ಹೇಳಿಕೆ (A) ಸರಿ, (B) ತಪ್ಪು

(B) ಹೇಳಿಕೆ (A) ತಪ್ಪು, (B) ಸರಿ

(C) ಎರಡೂ ಹೇಳಿಕೆಗಳು ತಪ್ಪು

(D) ಎರಡೂ ಹೇಳಿಕೆಗಳು ಸರಿ

**71.** ಈ ಕೆಳಗಿನವುಗಳನ್ನು ಹೊಂದಿಸಿ :

| **ಪಟ್ಟಿ - I** | **ಪಟ್ಟಿ - II** |
|---|---|
| a. ಪರಿಚ್ಛೇದ 112 | i. ವಿದೇಶಿ ವಿನಿಮಯ ಆಸ್ತಿ ವರ್ಗಾವಣೆ |
| b. ಪರಿಚ್ಛೇದ 46 | ii. GDRಗಳ ವರ್ಗಾವಣೆ |
| c. ಪರಿಚ್ಛೇದ 115 D | iii. ದೀರ್ಘಾವಧಿ ಲಾಭದ ಮೇಲಿನ ತೆರಿಗೆ |
| d. ಪರಿಚ್ಛೇದ 115 AC | iv. ಆಸ್ತಿ ಹಂಚಿಕೆ ಮೇಲಿನ ದೀರ್ಘಾವಧಿ ಲಾಭ |

**ಸಂಕೇತಗಳು :**

| | a | b | c | d |
|---|---|---|---|---|
| (A) | iii | iv | i | ii |
| (B) | iii | iv | ii | i |
| (C) | iv | iii | ii | i |
| (D) | ii | iii | i | iv |

**72.** ಪರಿಚ್ಛೇದ 115 JBನ ಪ್ರಕಾರ ಲಾಭ-ನಷ್ಟ ಖಾತೆಗೆ ಖರ್ಚು ಹಾಕಿರುವ ಈ ಕೆಳಗಿನವುಗಳನ್ನು ನಿವ್ವಳ ಲಾಭಕ್ಕೆ ಸೇರಿಸಬೇಕು.

1. ಲಾಭಾಂಶ ನೀಡಿದ ಮೊತ್ತ
2. ಸವಕಳಿಯ ಮೊತ್ತ
3. ಮುಂದೂಡಿದ ತೆರಿಗೆಯ ಮೊತ್ತ

**ಸಂಕೇತಗಳು :**

(A) 1 ಮತ್ತು 2 ಸರಿಯಾಗಿವೆ

(B) 2 ಮತ್ತು 3 ಸರಿಯಾಗಿವೆ

(C) 1 ಮತ್ತು 3 ಸರಿಯಾಗಿವೆ

(D) 1, 2 ಮತ್ತು 3 ಸರಿಯಾಗಿವೆ

**73.** ಒಂದು ಸಂಸ್ಥೆಯ ದೀರ್ಘಾವಧಿಯ ಬಂಡವಾಳದ ಲಾಭವನ್ನು ಪರಿಚ್ಛೇದ 112ರ ಪ್ರಕಾರ ______ ದರದಲ್ಲಿ ತೆರಿಗೆಗೊಳಪಡಿಸಬೇಕು.

(A) 40% (B) 30%

(C) 25% (D) 20%

**74.** ಈ ಕೆಳಗಿನವುಗಳಲ್ಲಿ ಯಾವ ಪರಿಚ್ಛೇದದಡಿ ಬೇರೆ ಯಾವುದೇ ಪರಿಚ್ಛೇದದಡಿ ಕಳೆಯಲಾಗದ ವೆಚ್ಚಗಳನ್ನು ಕಳೆಯಬಹುದಾಗಿದೆ ?

(A) ಪರಿಚ್ಛೇದ 37

(B) ಪರಿಚ್ಛೇದ 37(1)

(C) ಪರಿಚ್ಛೇದ 37(2)

(D) ಪರಿಚ್ಛೇದ 37(3)

**75.** 'ಬಾಂಡ್ ವಾಷಿಂಗ್' ವ್ಯವಹಾರವು ಈ ಕೆಳಗಿನ ಯಾವ ಪರಿಚ್ಛೇದಕ್ಕೆ ಸಂಬಂಧಿಸಿದೆ ?

(A) ಪರಿಚ್ಛೇದ 57

(B) ಪರಿಚ್ಛೇದ 94

(C) ಪರಿಚ್ಛೇದ 95

(D) ಪರಿಚ್ಛೇದ 43

**70.** **Statement (A)** : Education cess is leviable in case of all assessees.

**Statement (B)** : Income deemed to accrue or arise in India is taxable in case of resident only.

**Codes :**

(A) Statement (A) is correct, but (B) is wrong

(B) Statement (A) is wrong, but (B) is correct

(C) Both the Statements are wrong

(D) Both the Statements are correct

**71.** Match the following :

| | **List – I** | | **List – II** |
|---|---|---|---|
| a. | Sec. 112 | i. | Transfer of foreign exchange asset |
| b. | Sec. 46 | ii. | Transfer of GDRs |
| c. | Sec. 115 D | iii. | Tax on L-T capital gains |
| d. | Sec. 115 AC | iv. | Capital gains on distribution of assets |

**Codes :**

| | **a** | **b** | **c** | **d** |
|---|---|---|---|---|
| (A) | iii | iv | i | ii |
| (B) | iii | iv | ii | i |
| (C) | iv | iii | ii | i |
| (D) | ii | iii | i | iv |

**72.** U/S 115JB, the net profit shall be increased by the following items if already debited to P&L account.

1. The amount of dividend paid
2. The amount of depreciation
3. The amount of deferred tax

**Codes :**

(A) 1 and 2 are correct

(B) 2 and 3 are correct

(C) 1 and 3 are correct

(D) 1, 2 and 3 are correct

**73.** Long-term capital gains in case of a firm U/S 112 taxed at

(A) 40%
(B) 30%
(C) 25%
(D) 20%

**74.** _____ Section of I.T. Act accommodates all deductible expenses other than those specifically covered by other provisions.

(A) 37

(B) 37(1)

(C) 37(2)

(D) 37(3)

**75.** Bond washing transaction is covered under which section of I.T. Act ?

(A) Sec. 57

(B) Sec. 94

(C) Sec. 95

(D) Sec. 43

ಚಿತ್ತು ಬರಹಕ್ಕಾಗಿ ಸ್ಥಳ
Space for Rough Work